(ದಿನಾಂಕಃ 15-03-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

ಮಧ್ಯಂತರ ಅರ್ಜಿಯ ಅದೇಶದ ಮೇರಗೆ -

ಮುಂದುವರೆದ ಮುಖ್ಯ ವಿಚಾರಣೆ ಃ ಶ್ರೀ. ಎಸ್.ಎಸ್.ಎಸ್. ಪ್ರತಿವಾದಿ ಪರ ವಕೀಲರಿಂದ -

ಅಸಲು ದಾವೆ ಸಂಖ್ಯೆ 64/2003 ರ ತೀರ್ಪಿನ ದೃಢೀಕೃತ ಪ್ರತಿ ನಿ.ಡಿ-28 ಎಂದು, ಆರ್.ಎ.ನಂ. 20/2012 ರಲ್ಲಿನ ಅಪೀಲ ಮೆಮೊ ಮತ್ತು ಆದೇಶ ಪುಟಗಳ ದೃಢೀಕೃತ ಪ್ರತಿ ನಿ.ಡಿ-29, 30 ಎಂದು, ಬಸವ್ವ ಈಕೆಯ ಆಧಾರ ಕಾರ್ಡನ ದೃಢೀಕೃತ ಪ್ರತಿ ನಿ.ಡಿ-31 , ಅಪೀಲನಲ್ಲಿ ಸಲ್ಲಿಸಿರುವ ಮಧ್ಯಂತರ ಅರ್ಜಿಯ ದೃಢೀಕೃತ ಪ್ರತಿ ನಿ.ಡಿ- 32, ಸಿ.ಸಿ. ನಂ. 243/2006 ರಲ್ಲಿನ ಅಂತಿಮ ವರದಿಯ ದೃಢೀಕೃತ ಪ್ರತಿ ನಿ.ಡಿ-33, ಸಿ.ಸಿ. ನಂ. 290/2000 ರಲ್ಲಿನ ಅಂತಿಮ ವರದಿಯ ನಿ.ಡಿ-34, ಅಸಲು ದಾವೆ ನಂ. 31/2006 ರಲ್ಲಿ ಮಾರುತಿ ಗೂಳಪ್ಪ ಬಂಗಾರಿ ಈತನ ಸಾಕ್ಷಿ ಹೇಳಿಕೆ ದೃಢೀಕೃತ ಪ್ರತಿ ನಿ.ಡಿ-35 ಎಂದು ಗುರುತಿಸಲಾಯಿತು.

ಪಾಟಿ ಸವಾಲು ಃ ಶ್ರೀ ಡಿ.ಪಿ.ಟಿ. ವಾದಿ ಪರ ವಕೀಲರಿಂದ -

ಇರುವುದಿಲ್ಲ

ಪಾಟಿ ಸವಾಲು ಃ ಶ್ರೀ ಪಿ.ಆರ್.ಸಿ. 2, 4 ಮತ್ತು 6 ನೇ ಪ್ರತಿವಾದಿ ಪರ ವಕೀಲರಿಂದ -

ನಾನು 1 ನೇ ತರಗತಿ ವರೆಗೆ ಶಾಲೆ ಕಲಿತಿರುತ್ತೇನೆ. ಮೊದಲಿನಿಂದಲೂ ನಾನು ಸಹಿ ಮಾಡಿಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ. ಹೆಬ್ಬೆಟ್ಟು ಗುರುತು ಹಾಕುತ್ತ ಬಂದಿರುತ್ತೇನೆ. ನನ್ನ ತಂದೆ ಶಿವಪ್ಪ ಹರಿಜನ ಎಂದರೆ ಸರಿ. ಶಿವಪ್ಪ ಹರಿಜನ ಈತನ ಖುದ್ದು ಊರು ಯರಗಟ್ಟಿ ಇರುತ್ತದೆ. ಶೆಟ್ಟೆಪ್ಪ ಗೂಳಪ್ಪ ಹೊಲೆರ ಮತ್ತು ಶಿವಪ್ಪ ಹರಿಜನ ಇವರಿಗೆ ಯಾವುದೆ ಸಂಬಧ ಇಲ್ಲ ಎಂದರೆ ಸರಿ. ಈ ಹಿಂದೆ ಅಸಲು ದಾವೆ ಸಂಖ್ಯೆ 64/2003 ರಲ್ಲಿನ ದಾವಾಸ್ತಿಗಳು ಮತ್ತು ಈ ದಾವೆಯಲ್ಲಿನ ಆಸ್ತಿಗಳು ಒಂದೇ ಇರುತ್ತವೆ. ಅಸಲು ದಾವೆ ನಂ. 64/2003 ರ ದಾವೆಯನ್ನು ಶಿವನವ್ವ , ಬಸವ್ವ ತುಳಸವ್ವ ಇವರು ನನ್ನ ಮತ್ತು ಬಾಳಪ್ಪನ ಮೇಲೆ ಮಾಡಿದ್ದರು ಎಂದರೆ ಬಾಳಪ್ಪನ ಮೇಲೆ ಮಾತ್ರ ಮಾಡಿದ್ದರು ಎನ್ನುತ್ತಾರೆ. ಸದ್ರಿ ದಾವೆಯನ್ನು ಮಾಡುವ 2 ವರ್ಷ ಪೂರ್ವದಲ್ಲಿಯೇ ತುಳಸವ್ವ ತೀರಿಕೊಂಡಿದ್ದಳು ಎಂದರೆ ಸರಿ. ಸದ್ರಿಯವರು ಮಾಡಿದ ದಾವೆ ಅವರ ವಿರುದ್ಧ ಆಗಿತ್ತು ಎಂದರೆ ಸರಿ. ಸದ್ರಿ ದಾವೆ ನಿಖಾಲೆಯಾದ ನಂತರವೇ ಬಾಳಪ್ಪ ಮೃತನಾಗಿರುತ್ತಾನೆ. ಬಾಳಪ್ಪ ಮೃತನಾದ ಬಳಿಕ ದುಂಡೆವ್ವ, ಗೂಳಪ್ಪ , ಕೆಂಪವ್ವ ಇವರು ಅಪೀಲು ನಂ. 20/2012 ರಂತೆ ಮೇಲ್ಮನವಿ ಸಲ್ಲಿಸಿತ್ತಾರೆ ಎಂದರೆ ಸಾಕ್ಷಿ ಸುಳ್ಳು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದ್ರಿ ಅಪಿಲಿನಲ್ಲಿ ನಾನು ವಕೀಲರನ್ನು ನೇಮಿಸಿಕೊಂಡು ನ್ಯಾಯಾಲಯಕ್ಕೆ ಹೋಗಿ ಬಂದು ಮಾಡುತ್ತಿದ್ದೇನೆ ಎಂದರೆ ಸರಿ. ಸದ್ರಿ ಅಪೀಲು ಇನ್ನೂ ಚಾಲ್ತಿಯಲ್ಲಿರುತ್ತದೆ ಎಂದರೆ ಸರಿ . ಈ ದಾವೆಯನ್ನು ಶಿವಣವ್ವ ಇವಳ ವಾರಸುದಾರರು ಮತ್ತು ಬಸವ್ವ ಮತ್ತು ತುಳಸವ್ವನ ಇವರ ವಾರಸುದಾರರು ನನ್ನ ಮತ್ತು ಬಾಳಪ್ಪನ ವಾರಸುದಾರರ ಮೇಲೆ ಮಾಡಿರುತ್ತಾರೆ ಎಂದರೆ ಸರಿ. ಅಸಲು ದಾವೆ ಸಂಖ್ಯೆ 64/2003 ರ ತೀರ್ಪಿನ ಮೇಲೆ ನಾನು ಅಪೀಲು ಸಲ್ಲಿಸಿರುತ್ತೇನೆ. ಸದ್ರಿ ಅಪೀಲು ನಂಬರ ನನಗೆ ಹೇಳಲು ಬರುವುದಿಲ್ಲ.

ಶೆಟ್ಟೆಪ್ಪನ ತಂದೆ ಗೂಳಪ್ಪ. ಸದ್ರಿ ಗೂಳಪ್ಪನನ್ನು ನಾನು ನೋಡಿಲ್ಲ ಎಂದರೆ ಸರಿ. ಗೂಳಪ್ಪನಿಗೆ ಶೆಟ್ಟೆಪ್ಪ ಮತ್ತು ಬಾಳಪ್ಪ ಎಂಬುವವರು ಅಣ್ಣಂದಿರರು ಮತ್ತು ತಂಗೆವ್ವಾ ಎಂಬುವವಳು ಸಹೋದರಿ ಇರುತ್ತಾಳೆ ಎಂದರೆ ಸರಿ . ತಂಗೆವ್ವಾ ಇವಳು ಮದುವೆಯಾಗಿ 40

ವರ್ಷ ಆಗಿದ್ದು ಚಿಕ್ಕಾಲಗುಡ್ಡದಲ್ಲಿರುತ್ತಾಳೆ ಎಂದರೆ ಸರಿ. ಆಕೆ ದಾವಾ ಜಮೀನಿನ ಕಬ್ಜಾಕ್ಕೆ ಬಂದಿಲ್ಲ ಎಂದರೆ ಸರಿ.

ಶೆಟ್ಟೆಪ್ಪ 1983 ನೇ ಸಾಲಿನಲ್ಲಿ ತೀರಿಕೊಂಡಿರುತ್ತಾನೆ ಎಂದರೆ ಸರಿ . ಬಾಳಪ್ಪ 1991 ರಲ್ಲಿ ತೀರಿಕೊಂಡಿರುತ್ತಾನೆ ಎಂದರೆ ಸರಿ. ಮೊದಲಿನಿಂದಲೂ ದಾವಾ ಜಮೀನುಗಳನ್ನು ಶೆಟೆಪ್ಪ ಮತ್ತು ಬಾಳಪ್ಪ ಕಬ್ಜಾ ಮಾಡುತ್ತಿದ್ದಾರೆ ಎಂದರೆ ಸರಿ. ಶೆಟ್ಟೆಪ್ಪ ತೀರಿಕೊಂಡ ಬಳಿಕ ಬಾಳಪ್ಪ ಒಬ್ಬನೇ ದಾವಾ ಜಮೀನುಗಳನ್ನು ಸಾಗು ಮಾಡುತ್ತಿದ್ದ ಎಂದರೆ ಸರಿಯಲ್ಲ. ಶೆಟ್ಟೆಪ್ಪ ಈತನ ಮೂವರು ಹೆಣ್ಣು ಮಕ್ಕಳು ಯಾವಾಗ ಹುಟ್ಟಿರುತ್ತಾರೆ ಎಂದು ನನಗೆ ನೆನಪಿಲ್ಲ. ಸದ್ರಿಯವರು ಶೆಟ್ಟೆಪ್ಪನ ಮಕ್ಕಳು ಎಂದು ತೋರಿಸಲು ಕಾಗದ ಹಾಜರ ಪಡಿಸಿರುತ್ತೇನೆ. ಸದ್ರಿ ಮೂವರು ಹೆಣ್ಣು ಮಕ್ಕಳ ಜನನ ದಾಖಲೆಯನ್ನು ನೋಡಿದ ನೆನಪಿಲ್ಲ. ಅವುಗಳನ್ನು ನೋಡಿರುತ್ತೇನೆ ಆದರೆ ಈಗ ನೆನಪಿಲ್ಲ. ಶೆಟ್ಟೆಪ್ಪ ಈತನ ಮೂವರು ಹೆಣ್ಣು ಮಕ್ಕಳ ಜನ್ಮ ದಾಖಲೆಗಳನ್ನು ತಂದು ಹಾಜರ ಪಡಿಸುತ್ತೇನೆ. ಶೆಟ್ಟೆಪ್ಪ ಮತ್ತು ಶಿವಲಿಂಗವ್ವ ಇವರ ದಾಂಪತ್ಯ ಜೀವನದಿಂದ ಶಿವಣವ್ವ ಆಗಲಿ ಬಸವ್ವ ಆಗಲಿ ತುಳಸವ್ವ ಆಗಲಿ ಜನಿಸಿಲ್ಲ ಎಂದರೆ ಸರಿಯಲ್ಲ.

1962 ರಲ್ಲಿ ಭಕ್ಷೀಸು ಪತ್ರ ಮಾಡಿ ಕೊಟ್ಟಿರುತ್ತಾರೆ ಎಂದು ಹೇಳಿದ್ದು ಅದನ್ನು ಈ ದಾವೆಯಲ್ಲಿ ಹಾಜರ ಪಡಿಸಿರುತ್ತೇನೆ. ಭಕ್ಷೀಸು ಪತ್ರದಲ್ಲಿ ಸರ್ವೆ ನಂ 471 ಮತ್ತು 370 ರ ಸರ್ವೆ ನಂಬರ ಜಮೀನುಗಳ ಸಲುವಾಗಿ ಉಲ್ಲೇಖಿಸಲಾಗಿದೆ. ಸದ್ರಿ ಜಮೀನುಗಳನ್ನು ಹೊರತು ಪಡಿಸಿ ಬೇರೆ ಆಸ್ತಿಗಳನ್ನು ನಮೂದಿಸಿಲ್ಲ. ಸದ್ರಿ ಭಕ್ಷೀಸು ಪತ್ರ ಬರೆದುಕೊಟ್ಟ ಕಾಲಕ್ಕೆ ಅಂದರೆ 1962 ನೇ ಸಾಲಿನಲ್ಲಿ ಶೆಟ್ಟೆಪ್ಪ ಮತ್ತು ಬಾಳಪ್ಪನ ನಡುವೆ ವಾಟಣಿ ಆಗಿರಲಿಲ್ಲ ಎಂದರೆ ಸರಿ . ಭಕ್ಷೀಸು ಪತ್ರದಲ್ಲಿ ಸಮಾಯಿಕ 1/4 ಎಂದು ಬರೆಯಲಾಗಿದೆ ಎಂದರೆ ಸರಿ . ಸದ್ರಿ ಭಕ್ಷೀಸು ಪತ್ರವನ್ನು ಶಂಕರ ಕೋರೆ ಎಂಬುವವರು ಬರೆದಿರುತ್ತಾರೆ. ಅದನ್ನು ಬರೆಯುವ ಕಾಲಕ್ಕೆ ನನಗೆ 8-9 ವರ್ಷ ವಯಸ್ಸಾಗಿತ್ತು . ನಾನು 15 ವರ್ಷದವನಿದ್ದಾಗಿನಿಂದ ಶೆಟ್ಟೆಪ್ಪ ಈತನ ಸಂರಕ್ಷಣೆ ಮಾಡಿರುತ್ತೇನೆ. ಭಕ್ಷೀಸು ಪತ್ರದ ಪ್ರಕಾರ ನನ್ನ ಹೆಸರನ್ನು ಹಚ್ಚಿ ಸಿಕೊಳ್ಳುವ ಕಾಲಕ್ಕೆ ಶೆಟ್ಟೆಪ್ಪನ ತಮ್ಮ ಬಾಳಪ್ಪನಿಗೆ ನೋಟಿಸು ಕೊಟ್ಟಿರಲಿಲ್ಲ ಎಂದರೆ ಸರಿ. ಶೆಟ್ಟೆಪ್ಪ ತೀರಿಕೊಂಡ ಬಳಿಕ ಆತನ ಮೂವರು ಹೆಣ್ಣು ಮಕ್ಕಳ ಹೆಸರು ಉತಾರಿನಲ್ಲಿ ಹಚ್ಚಲಾಗಿತ್ತು. 1984 ರಲ್ಲಿ ಸದ್ರಿಯವರು ಹೆಸರು ಹಚ್ಚಿ ಸಲಾಗಿತ್ತು.

1984 ರಲ್ಲಿ ಸದ್ರಿ ಮೂವರು ಹೆಣ್ಣು ಮಕ್ಕಳು ನನಗೆ ಹಕ್ಕು ಬಿಟ್ಟ ಪತ್ರ ಮಾಡಿಕೊಟ್ಟಿರುತ್ತಾರೆ . ಸದ್ರಿ ಹಕ್ಕು ಬಿಟ್ಟ ಪತ್ರ ನೊಂದು ಇರುತ್ತದೆ. ಸದ್ರಿ ಕಾಗದವನ್ನು ಈ ದಾವೆಯಲ್ಲಿ ಹಾಜರ ಪಡಿಸಿರುತ್ತೇನೆ. ದಾವಾಸ್ತಿಗೆ ಸಂಬಂಧಿಸಿದಂತೆ ಹಕ್ಕು ಬಿಟ್ಟ ಪತ್ರ ಇರುತ್ತದೆ. ಅದನ್ನು ಕೋರಿ ಶಂಕರ ಎಂಬುವವರು ಬರೆದಿರುತ್ತಾರೆ. ಹಕ್ಕು ಬಿಟ್ಟ ಪತ್ರಕ್ಕೆ ಬಸಗೌಡಾ ಪಾಟೀಲ ಎಂಬಾರ ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ. ಸದ್ರಿ ಹಕ್ಕು ಬಿಟ್ಟ ಪತ್ರದಲ್ಲಿ ಸದ್ರಿ ಜಮೀನಿನ ಚೆಕ್ಕುಬಂದಿಯನ್ನು ಬರೆಯಲಾಗಿರುತ್ತದೆ. ಸದ್ರಿ ಚೆಕ್ಕಬಂದಿ ಅಂದರೆ ಪೂರ್ವಕ್ಕೆ ಮಾನಿಂಗ ಪೂಂಡಲೀಕ , ಪಶ್ಚಿಮಕ್ಕೆ ಆನಂದ ಅಮ್ಮಣಗಿ ಇವರ ಜಮೀನು , ದಕ್ಷಿಣಕ್ಕೆ ರಾಯಪ್ಪ ಶಂಕರ ಉತ್ತರಕ್ಕೆ ರಸ್ತೆ ಇರುತ್ತದೆ.

ದಾವಾ ಜಮೀನ ಸರ್ವೆ ನಂಬರನಲ್ಲಿ ಒಟ್ಟು 2 ಎಕರೆ 8 ಗುಂಟೆ ಸಂಬಂಧ ಹಕ್ಕು ಬಿಟ್ಟ ಪತ್ರವನ್ನು ಬರೆದುಕೊಟ್ಟಿರುತ್ತಾರೆ. ಶೆಟ್ಟೆಪ್ಪನ 3 ಜನ ಹೆಣ್ಣು ಮಕ್ಕಳು ದಾವಾ ಜಮೀನಿನ ಸಂಬಂಧ ಹಕ್ಕು ಬಿಟ್ಟ ಪತ್ರ ಬರೆದುಕೊಟ್ಟಿಲ್ಲ ಎಂರದೆ ಸರಿಯಲ್ಲ. ಸದ್ರಿಯವರು ಯಾವುದೇ ಸಾದಾ ಪತ್ರವನ್ನಾಗಲೀ ನೊಂದು ಪತ್ರವನ್ನಾಗಲೀ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ದಾವಾ

ಜಮೀನಿನ ಸಂಬಂಧ ತಹಶೀಲ್ದಾರ ಕಡೆಗೆ ಎ.ಸಿ ಮತ್ತು ಡಿ.ಸಿ ನ್ಯಾಯಾಲಯಗಳಲ್ಲಿ ನನ್ನ ಮತ್ತು ಬಾಳಪ್ಪನ ನಡುವೆ ಕೇಸುಗಳು ನಡೆದಿದ್ದವು ಎಂದರೆ ಸರಿ. ಸದ್ರಿ ಪ್ರಕರಣಗಳನ್ನು ಬೆಳಗಾವಿಯಲ್ಲಿ ನಾನು ಬಸಪ್ಪ ಶಿವಪ್ಪ ಹರಿಜನ ಎಂಬ ಹೆಸರಿನಲ್ಲಿ ನಡೆಸಿರುತ್ತೇನೆ ಎಂದರೆ ಸರಿಯಲ್ಲ. 2002 ಮತ್ತು 2003 ನೇ ಸಾಲಿನಲ್ಲಿ ನನ್ನ ಹೆಸರು ಕಡಿಮೆಯಾಗಿ ಡೈರಿ ಆಗಿರುತ್ತದೆ ಎಂದರೆ ಸರಿ . ಮುಂದುವರೆದು ಸುಳ್ಳಾಗಿ ಆ ರೀತಿ ದಾಖಲೆ ಆಗಿರುತ್ತದೆ. ಸದ್ರಿ ಡೈರಿ ಸಂಬಂಧ ಸುಳ್ಳು ದಾಖಲೆ ಮಾಡಿಕೊಂಡಿರುತ್ತಾರೆ ಎಂದು ನಾನು ಬಾಳಪ್ಪನ ಮೇಲೆ ಕೇಸು ಮಾಡಿರುತ್ತೇನೆ. ಸದ್ರಿ ದಾವೆ ನಂಬರ ನನಗೆ ಹೇಳಲು ಬರುವುದಿಲ್ಲ. ಇದೇ ಹುಕ್ಕೇರಿ ನ್ಯಾಯಾಲಯದಲ್ಲಿ ಕೇಸನ್ನು ಸಲ್ಲಿಸಿರುತ್ತೇನೆ. ದಾವಾ ಸ್ವತ್ತುಗಳ ಸಂಬಂಧ ಅಸಲು ದಾವೆ ನಂ. 64/2003, 31/0015 ಮತ್ತು ಈ ದಾವೆಯನ್ನು ಹೊರತು ಪಡಿಸಿ ಬೇರೆ ದಾವೆಗಳು ಇರುವುದಿಲ್ಲ.

ದಾವಾ ಜಮೀನುಗಳು ಗುಡಸ ಗ್ರಾಮದಿಂದ ಉತ್ತರಕ್ಕೆ ಸುಮಾರು 2 ಕಿ.ಮೀ ದೂರರದಲ್ಲಿ ಒಂದಕ್ಕೊಂದು ಹತ್ತಿ ಇರುತ್ತವೆ. ರಿಸ.ನಂ. 475 ರಲ್ಲಿ 4 ಎಕರೆ 16 ಗುಂಟೆ ಜಮೀನು ಇರುತ್ತದೆ. 374 ರ ಜಮೀನು 16 ಗುಂಟೆ ಇರುತ್ತದೆ ಎಂದರೆ ಸರಿ. ರಿ . ನಂ. 374 ರ ಜಮೀನಿನಲ್ಲಿ ಬಾಳಪ್ಪನ ತಂದಗೆ ಗೂಳಪ್ಪನಿಗೆ ಕೇವಲ 8 ಗುಂಟೆ ಮಾತ್ರ ಬಂದಿರುತ್ತದೆ ಎಂರೆ ಸರಿ. ಮುಂದುವರೆದು ನನಗೆ 8 ಗುಂಟೆ ಬಂದಿರುತ್ತದೆ ಎನ್ನುತ್ತಾರೆ. ನನಗೆ 8 ಗುಂಟೆ ಬಂದ ಸಂಬಂಧ ಉತಾರ ಇರುವುದಿಲ್ಲ. 2 ಜಮೀನುಗಳ ದಕ್ಷಿಣಕ್ಕೆ 1 ಕಿ.ಮೀ ಅಂತರದಲ್ಲಿ ಕೆನಾಲ ಇರುತ್ತದೆ. ಸದ್ರಿ ಕೆನಾಲಿನ 2 ಬದಿ ಇರುವ ಜಮೀನುಗಳು ನೀರಾವರಿಯದ್ದು ಇರುತ್ತದೆ ಎಂದರೆ ಸರಿ. ಈಗ್ಗೆ 30-40 ವರ್ಷಗಳಿಂದ ನೀರಾವರಿ ಇರುತ್ತದೆ ಎಂದರೆ ಸರಿ. ಈಗ್ಗೆ 4-5 ವರ್ಷದ ಹಿಂದೆ ಸದ್ರಿ ಜಾಗ ಜಮೀನಿನ 1 ಎಕರೆಗೆ 25 ರಿಂದ 30 ಲಕ್ಷ ಕಿಮ್ಮತ್ತು ಆಗಿರುತ್ತದೆ ಎಂದರೆ ಸರಿ .

ಬಾಳಪ್ಪನ ಜೀವಿತ ಕಾಲದಲ್ಲಿ ನನಗೂ ಆತನಿಗೂ ಮಾತುಕತೆ ಇರಲಿಲ್ಲ ಎಂದರೆ ಸರಿ. ಬಾಳಪ್ಪನ ಕಾಲದಿಂದಲೂ ಆತನ ಇಬ್ಬರು ಮಕ್ಕಳು ಗೂಳಪ್ಪ ಮತ್ತು ಮಾರುತಿ ಇಬ್ಬರೂ ಮಿಲಿಟರಿಯಲ್ಲಿ ಇರುತ್ತಾರೆ ಎಂದರೆ ಸರಿ . ಬಾಳಪ್ಪ ತೀರಿಕೊಳ್ಳುವ ಕಾಲಕ್ಕೆ ಆತನಿಗೆ ಸುಮಾರು 75 ವರ್ಷ ವಯಸ್ಸಾಗಿತ್ತು ಎಂದರೆ ಸರಿ . ಆತ ಅಶಕ್ತನಾಗಿದ್ದು ಕಣ್ಣು ಕಾಣಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಬಾಳಪ್ಪನ ಜೀವಿತ ಕಾಲದಲ್ಲಿ ಆತನ ಹೆಂಡತಿ ಸ್ವಪ್ನಾ ಈಕೆಯು ಆತನ ಜೋಪಾನ ಜತನ ಮಾಡಿರುತ್ತಾಳೆ ಎಂದರೆ ನನಗೆ ಗೊತ್ತಿಲ್ಲ. 25 ವಶಷಗಳಿಂದ ದಾವಾ ಜಮೀನುಗಳು ಕಡೆಗೆ ಹಾದಿಲ್ಲ ಎಂದರೆ ಸರಿಯಲ್ಲ ಎಂದರೆ ಸಾಕ್ಷಿ 8-9 ವರ್ಷಗಳಿಂದ ಹೋಗಿಲ್ಲ ಎಂದು ನುಡಿದಿರುತ್ತಾರೆ. ದಾವಾ ಜಮೀನಿನಲ್ಲಿ 2001 ರಿಂದ 6 ನೇ ಪ್ರತಿವಾದಿ ಕಬ್ಜಾದಲ್ಲಿರುತ್ತಾಳೇ ಎಂದರೆ ಸರಿಯಲ್ಲ. ಈಗ 8-9 ವರ್ಷಗಳಿಂದ ಕಬ್ಜಾದಲಿಲ್ಲಿರುತ್ತಾಳೆ. ಆಕೆಯೇ ಆರ್, ಎಸ್, ನಂ. 475 ರಲ್ಲಿ ಕಬ್ಬು ಬೆಳೆದು ಕಾರಖಾನೆಗೆ ಕಳುಹಿಸುತ್ತಿದ್ದಾಳೆ ಎಂದರೆ ಸರಿ . ರಿ . ಸ. ನಂ. 374 ರಲ್ಲಿ ಯಾವುದೇ ಬೆಳೆ ಬೆಳೆದಿಲ್ಲ. ಮುಂದುವರೆದು ದಾವಾ ಜಮೀನಿನ ಉತಾರಿನಲ್ಲಿ ನನ್ನ ಹೆಸರು ಇಲ್ಲದ್ದರಿಂದ ನಾನು ಕಬ್ಜಾಕ್ಕೆ ಹೋಗುವುದನ್ನು ತಪ್ಪಿ ಸಿರುತ್ತಾರೆ.

ರಿ.ಸ.ನಂ. 475 ರ ಜಮೀನಿನಲ್ಲಿ ಮನೆ ಇದ್ದು ಅದರಲ್ಲಿ 6 ನೇ ಪ್ರತಿವಾದಿ ಮತ್ತು ಅವರ ಕುಟುಂಬದ ಜನರು ವಾಸ ಇರುತ್ತಾರೆ ಎಂದರೆ ಸಾಕ್ಷಿ ಅವರ ಪಾಲಿಗೆ ಬಂದ ಜಮೀನಿನಲ್ಲಿ ಮನೆ ಕಟ್ಟಿಕೊಂಡು ವಾಸ ಇರುತ್ತಾರೆ ಎನ್ನುತ್ತಾರೆ. ಸದ್ರಿ ಜಾಗದಲ್ಲಿ ದನಗಳ ಶೆಡುವ್ಗಳನ್ನು ಕಟ್ಟಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಅವರ ಹೊಲದಲ್ಲಿ ಕಟ್ಟಿಕೊಂಡಿರುತ್ತಾರೆ ಎನ್ನುತ್ತಾರೆ. ದಾವಾ ಜಮೀನುಗಳ ಸಂಬಂಧ ಶೆಟೆಪ್ಪ ಯಾವುದೇ ಭಕ್ಷೀಸು ಪತ್ರ ಬರೆದುಕೊಟ್ಟಿಲ್ಲ ಎಂದರೆ

ಸರಿಯಲ್ಲ. ಭಕ್ಷೀಸು ಪತ್ರವನ್ನಾಗಲೀ ಹಕ್ಕು ಬಿಟ್ಟ ಪತ್ರವನ್ನಾಗಲಿ ಬರೆದುಕೊಟ್ಟಿಲ್ಲ ಹಾಗೂ ನಾನು ಸದ್ರಿ ಜಮೀನುಗಳಲ್ಲಿ ಯಾವತ್ತೂ ಕಬ್ಜಾದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಜಮೀನಿನಲ್ಲಿ ಕಬ್ಜಾದಲ್ಲಿರುವುದಕ್ಕೆ 6 ನೇ ಪ್ರತಿವಾದಿ ಹರಕತ ಮಾಡಿರುವುದಿಲ್ಲ. ಗುಡಸ ಗ್ರಾಮದಲ್ಲಿ ಈಗ್ಗೆ 10 ವರ್ಷಗಳ ನಂತರ 10 ಪಟ್ಟು ಕಿಮ್ಮತ್ತು ಹೆಚ್ಚಾಗಿರುತ್ತದೆ ಎಂದರೆ ಸರಿ. ಜಮೀನುಗಳು ಹೆಚ್ಚು ಫಲವತ್ತಾದ ಕಾರಣ ಬಾಳಪ್ಪ ಈತನ ವಾರಸುದಾರನಿಗೆ ತ್ರಾಸು ಕೊಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶೆಟ್ಟೆಪ್ಪ ಈತನ ಮನೆತನಕ್ಕೂ ಮತ್ತು ನನಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. 1962 ರಿಂದಾಗಲೀ ಅಥವಾ ಯಾವಾಗಲಾಗಲೀ ನಾನು ದಾವಾ ಜಮೀನುಗಳಲ್ಲಿ ಕಬ್ಜಾದಲ್ಲಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೆ ಕೇ ಸರಿ ಅದೇ

ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ